ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/48/ಸಿಡಿಸಿ/2017-18/3004

ನಿರ್ದೇಶಕರವರ ಕಛೇರಿ
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 06-02-2018.

## :ಸುತ್ತೋಲೆ:

ವಿಷಯ:- ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳು ವಿವಿಧ ಔದ್ಯೋಗಿಕ ಸಂಸ್ಥೆಗಳಲ್ಲಿ ಉದ್ಯೋಗಗಳನ್ನು (ಪ್ಲೇಸ್‌ಮೆಂಟ್) ಪಡೆಯುವಲ್ಲಿ ತರಬೇತಿ ಹಾಗು ಆಯ್ಕೆ ಪ್ರಕ್ರಿಯೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ:- 1). HireMee ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಪವನ ಕುಮಾರ್ ರೆಡ್ಡಿ ಪಿ ಇವರು ಸಲ್ಲಿಸಿರುವ ಪ್ರಸ್ತಾವನೆ ದಿನಾಂಕ:21-08-2017.

2). ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು HireMee ಸಂಸ್ಥೆಯ ಜೊತೆ ಮಾಡಿರುವ ಒಡಂಬಡಿಕೆ (MOU).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿ ಬರುವ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅಭ್ಯಸಿಸುತ್ತಿರುವ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ, ಕೌಶಲ್ಯ ತರಬೇತಿ ಹಾಗು ಉದ್ಯೋಗಗಳನ್ನು (ಪ್ಲೇಸ್‌ಮೆಂಟ್) ಪಡೆಯುವಲ್ಲಿ, ತರಬೇತಿ ಹಾಗು ಆಯ್ಕೆ ಪ್ರಕ್ರಿಯೆಗಳನ್ನು ನಡೆಸುವ ಸಲುವಾಗಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯವು "ಔದ್ಯೋಗಿಕ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ-Corporate social responsibility" ಅಡಿ HireMee (K.A.A.M. Services Pvt.Ltd.) No. 483, Seetha Complex, 16th Cross, RR Nagar, Begaluru ಸಂಸ್ಥೆಯ ಜೊತೆ ಈ ಕೆಳಕಂಡ ಷರತ್ತುಗಳ ಅನ್ವಯ ಕಾರ್ಯನಿರ್ವಹಣೆಯ ಒಡಂಬಡಿಕೆಯನ್ನು (MOU) ಮಾಡಲಾಗಿದೆ.

1. HireMee (K.A.A.M. Services Pvt.Ltd.) No. 483, Seetha Complex, 16th Cross, RR Nagar, Begaluru ಸಂಸ್ಥೆಯು "ಔದ್ಯೋಗಿಕ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ (Corporate Social Responsibility)" ಯಡಿ ಡಿಪ್ಲೊಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಉದ್ಯೋಗ ಪಡೆಯುವಲ್ಲಿ ಬೇಕಾಗಿರುವ ಕೌಶಲ್ಯಗಳನ್ನು ನೀಡಲು ಹಾಗು ಉದ್ಯೋಗ ಪಡೆಯಲು ಬೇಕಾಗಿರುವ (ಪ್ಲೇಸ್‌ಮೆಂಟ್) ತರಬೇತಿ ಹಾಗು ಆಯ್ಕೆ ಪ್ರಕ್ರಿಯೆಗಳನ್ನು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿರುವ ಪ್ಲೇಸ್‌ಮೆಂಟ್ ಕೋಶದ ಮುಖಾಂತರ ಸಂಸ್ಥೆಯ ಪ್ರಾಚಾರ್ಯರ ಅನುಮತಿ ಹಾಗು ಸಹಕಾರದೊಂದಿಗೆ ನಡೆಸಬಹುದಾಗಿದೆ.

2. ಸದರಿ ಪ್ರಕ್ರಿಯೆಗಳ ಕಾರ್ಯದ ಬಗ್ಗೆ ಸರ್ಕಾರ, ತಾಂತ್ರಿಕ ಶಿಕ್ಷಣ ಇಲಾಖೆ, ಪಾಲಿಟೆಕ್ನಿಕ್ ಸಂಸ್ಥೆ ಹಾಗು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಆರ್ಥಿಕ ಹೊರೆ ಇರುವುದಿಲ್ಲ ಹಾಗು ಪ್ರಕ್ರಿಯೆಗೆ ತಗಲುವ ಎಲ್ಲಾ ಆರ್ಥಿಕ/ಸಾಮಾಗ್ರಿಗಳ ನೆರವು ಮತ್ತು ಮಾನವ ಸಂಪನ್ಮೂಲಗಳನ್ನು HireMee (K.A.A.M. Services Pvt.Ltd.) ಸಂಸ್ಥೆಯೇ ಒದಗಿಸುವುದು.

3. ಸದರಿ ಒಡಂಬಡಿಕೆಯ ಅವಧಿಯು ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು, ವರ್ಷಂಪ್ರತಿ ನವೀಕರಿಸಬಹುದಾಗಿದೆ. ಒಡಂಬಡಿಕೆಯ ಅವಧಿಯಲ್ಲಿ 30 ದಿನಗಳ ಮುಂಗಡ ನೋಟೀಸಿನ ಮುಖಾಂತರ ಕಾರಣ ನೀಡಿ ಎರಡೂ ಕಕ್ಷಿದಾರರು ಒಡಂಬಡಿಕೆಯನ್ನು ರದ್ದುಮಾಡಲು ಅವಕಾಶವಿರುತ್ತದೆ.

4 ಒಡಂಬಡಿಕೆಯಲ್ಲಿ ತಿಳಿಸಿರುವ ಕಾರ್ಯಗಳನ್ನು ಬಿಟ್ಟು ಇನ್ನಾವುದೇ ವಿಷಯಗಳ ಬಗ್ಗೆ ವ್ಯವಹರಿಸಲು HireMee (K.A.A.M. Services Pvt.Ltd.) ಸಂಸ್ಥೆಗೆ ಅವಕಾಶ ಇರುವುದಿಲ್ಲ ಹಾಗು ಪಾಲಿಟೆಕ್ನಿಕ್ ಸಂಸ್ಥೆಯ ದಿನನಿತ್ಯದ ಕೆಲಸ ಕಾರ್ಯಗಳಿಗೆ ಯಾವುದೇ ರೀತಿಯ ಅಡಚಣೆ ಉಂಟಾಗದಿರುವ ಷರತ್ತಿಗೆ ಒಳಪಟ್ಟಿರುತ್ತದೆ.

ಪಾಲಿಟೆಕ್ನಿಕ್ ಡಿಪ್ಲೊಮಾ ವಿದ್ಯಾರ್ಥಿಗಳ ಉದ್ಯೋಗಾವಕಾಶಗಳ ಹಿತದೃಷ್ಟಿಯಿಂದ, ಸಂಸ್ಥೆಯ ಪ್ರಾಚಾರ್ಯರು HireMee (K.A.A.M. Services Pvt.Ltd.) No. 483, Seetha Complex, 16th Cross, RR Nagar, Begaluru ಸಂಸ್ಥೆಯ ಸಹಯೋಗದೊಂದಿಗೆ ಮೇಲೆ ತಿಳಿಸಿದ ಷರತ್ತುಗಳನ್ವಯ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಹಾಗು ಸದರಿ ಕಾರ್ಯಕ್ರಮದ ಮುಖಾಂತರ ವಿದ್ಯಾರ್ಥಿಗಳಿಗೆ ದೊರಕಿರುವ ಉದ್ಯೋಗಾವಕಾಶಗಳ ಅಂಕಿ ಅಂಶಗಳ ವಿವರಗಳನ್ನು ಜಂಟಿ ನಿರ್ದೇಶಕರು (ಸಿಡಿಸಿ) ಇವರಿಗೆ jointdirector.cdc@gmail.com ಮಿಂಚಂಚೆ ಮುಖಾಂತರ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು
7/2/18

ಗೆ:
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರಿಗೆ– ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಜಂಟಿ ನಿರ್ದೇಶಕರು (ಎಟಿಎಸ್), ತಾಂ.ಶಿ.ನಿ, ಬೆಂಗಳೂರು.
2. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂ.ಶಿ.ನಿ, ಬೆಂಗಳೂರು.
3. ಜಂಟಿ ನಿರ್ದೇಶಕರು (ತನಿಖೆ), ತಾಂ.ಶಿ.ನಿ, ಬೆಂಗಳೂರು. –ಮಾಹಿತಿಗಾಗಿ.